ಉನ್ನತ ಶಿಕ್ಷಣ ಇಲಾಖಾ ಕಾಲೇಜುಗಳು

636 (612) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ಕಾಲೇಜುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು);

ಆ) ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯ ಪ್ರಮಾಣವು ನಿಗದಿತ ನಿಯಮಗಳಿಗೆ ಅನುಗುಣವಾಗಿದೆಯೇ? ಸಂಖ್ಯಾ ಕೊರತೆ ಇರುವ ಕಾಲೇಜುಗಳು ಎಷ್ಟು? (ವಿವರ ನೀಡುವುದು);

ಇ) ಕೊರತೆ ಇರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಸಂಖ್ಯೆ 360.

ಜಿಲ್ಲಾವಾರು ವಿವರ ಪಟ್ಟಿ ಲಗತ್ತಿಸಿದೆ (ಅನುಬಂಧ–1)

ಆ) ಸರ್ಕರದ ಆದೇಶ ಸಂಖ್ಯೆ ಇಡಿ 102 ಯುಎನ್ಇ 2009 ದಿನಾಂಕ: 04–06–2009 ರಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಕಾಲೇಜುಗಳಲ್ಲಿ ಬಿ.ಎ, ಬಿಎಸ್ಸಿ, ಬಿಬಿಎಂ ಮತ್ತು ಬಿಸಿಎ ಮುಂತಾದ ಪದವಿ ಕೋರ್ಸುಗಳಿಗೆ ಹಾಲಿ ಲಭ್ಯವಿರುವ ಪ್ರವೇಶಾತಿ ಪ್ರಮಾಣವನ್ನು 2009–10ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ವಿದ್ಯಾರ್ಥಿಗಳ ಕೋರಿಕೆಗನುಗುಣವಾಗಿ ಹೆಚ್ಚಿಸಲು ಮಂಜೂರಾತಿ ನೀಡಲಾಗಿದೆ. ಒಂದು ಪಕ್ಷ ಯಾವುದೇ ಹೊಸ ವಿಷಯ, ವಿಷಯ ಸಮೂಹಕ್ಕೆ (Combination) 15 ಮತ್ತು ಅದಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶಾತಿ ಆದಲ್ಲಿ ಆ ವಿದ್ಯಾರ್ಥಿಗಳನ್ನು ಹಾಲಿ ಇರುವ ವಿಭಾಗದಲ್ಲಿಯೇ ಸೇರಿಸಿ ಕೊಳ್ಳಬೇಕೆಂದು ಹಾಗೂ 15ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಪ್ರವೇಶಾತಿ ಆದಲ್ಲಿ ಹೊಸ ವಿಷಯ ಸಮೂಹ (Combination) ವನ್ನು ತೆರೆಯಲು ಸಹ ಅನುಮತಿ ನೀಡಲಾಗಿರುತ್ತದೆ. ಯಾವುದೇ ಸರಕಾರಿ ಕಾಲೇಜುಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಕಡಿಮೆ ಸಂಖ್ಯೆಯ ವಿದ್ಯಾರ್ಥಿಗಳ ಪ್ರವೇಶಾತಿ ಇರುವುದಿಲ್ಲ.

ಇ) ಕೊರತೆ ಇರುವ ಬೋಧಕರ ಒಟ್ಟು ಸಂಖ್ಯೆ – 847
ಕೊರತೆ ಇರುವ ಬೋಧಕೇತರ ಒಟ್ಟು ಸಂಖ್ಯೆ – 2336
ವಿವರಗಳನ್ನು ಲಗತ್ತಿಸಿದೆ (ಅನುಬಂಧ – 2)

ಅನುಬಂಧ–1

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
ಸರ್ಕಾರಿ ಕಾಲೇಜುಗಳ ಜಿಲ್ಲಾವಾರು ಪಟ್ಟಿ

ಕ್ರ ಸಂ.	ಜಿಲ್ಲೆಗಳು	ಕಾಲೇಜುಗಳ ಸಂಖ್ಯೆ
1	2	3
1	ಬೆಂಗಳೂರು	20
2	ಬೆಂಗಳೂರು (ಗ್ರಾ)	7
3	ರಾಮನಗರ	10
4	ಚಿತ್ರದುರ್ಗ	11
5	ದಾವಣಗೆರೆ	11
6	ಕೋಲಾರ	9
7	ಚಿಕ್ಕಬಳ್ಳಾಪುರ	9
8	ಶಿವಮೊಗ್ಗ	13
9	ತುಮಕೂರು	16
10	ಚಿಕ್ಕಮಗಳೂರು	13
11	ದಕ್ಷಿಣ ಕನ್ನಡ	16
12	ಉಡುಪಿ	11
13	ಹಾಸನ	26
14	ಕೊಡಗು	5
15	ಮಂಡ್ಯ	16
16	ಮೈಸೂರು	16
17	ಚಾಮರಾಜನಗರ	7
18	ಬೆಳಗಾವಿ	20

19	ಬಿಜಾಪುರ	7
20	ಬಾಗಲಕೋಟೆ	13
21	ಧಾರವಾಡ	8
22	ಗದಗ	9
23	ಹಾವೇರಿ	12
24	ಉತ್ತರ ಕನ್ನಡ	13
25	ಬಳ್ಳಾರಿ	13
26	ಬೀದರ್	8
27	ಗುಲ್ಬರ್ಗಾ	16
28	ಯಾದಗಿರಿ	5
29	ರಾಯಚೂರು	8
30	ಕೊಪ್ಪಳ	11
	ಒಟ್ಟು	360

ಅನುಬಂಧ–2

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಇಲಾಖೆಯಲ್ಲಿನ ವಿವಿಧ ವಿಷಯಗಳ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳ ವಿವರ

ಕ್ರ ಸಂ.	ವಿಷಯ	ಮಂಜೂರಾದ ಉಪನ್ಯಾಸಕರ ಒಟ್ಟು ಸಂಖ್ಯೆ	ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಒಟ್ಟು ಸಂಖ್ಯೆ	ಒಟ್ಟು ಖಾಲಿ ಹುದ್ದೆಗಳ ವಿವರ
1	ಕನ್ನಡ	573	619	54
2	ಆಂಗ್ಲಭಾಷೆ	465	417	48
3	ಹಿಂದಿ	62	53	9
4	ಸಂಸ್ಕೃತ	23	17	6
5	ತಮಿಳು	4	2	2
6	ತೆಲುಗು	7	4	3

7	ಉರ್ದು	43	32	11
8	ಅರೇಬಿಕ್	2	0	2
9	ಮರಾಠಿ	1	0	1
10	ಇತಿಹಾಸ	535	452	83
11	ಅರ್ಥಶಾಸ್ತ್ರ	580	511	69
12	ಶಿಕ್ಷಣ	3	2	1
13	ರಾಜ್ಯಶಾಸ್ತ್ರ	482	407	75
14	ಸಮಾಜಶಾಸ್ತ್ರ	350	329	21
15	ಭೂಗೋಳಶಾಸ್ತ್ರ	43	38	5
16	ಮನಃಶಾಸ್ತ್ರ	87	52	35
17	ತತ್ವಶಾಸ್ತ್ರ	4	4	0
18	ಸಹಕಾರ	2	0	2
19	ಗ್ರಾಮೀಣಾ ಪುನರಭಿವೃದ್ಧಿ	1	0	1
20	ಅಪರಾಧಶಾಸ್ತ್ರ	1	0	1
21	ಟೂರಿಸಂ	1	1	0
22	ಎಂಎಸ್ ಡಬ್ಲ್ಯೂ	3	0	3
23	ಮಿಲಿಟರಿ ಸೈನ್ಸ್	2	0	2
24	ವಾಣಿಜ್ಯ ಶಾಸ್ತ್ರ	973	886	87
25	ಮಾಸ್ಟರ್ ಆಫ್ ಇಂಟರ್ ನ್ಯಾಷನಲ್ ಬಿಸಿನೆಸ್	5	1	4
26	ಮಾಸ್ಟರ್ ಆಫ್ ಫೈನಾನ್ಸಿಯಲ್ ಅಕೌಂಟಿಂಗ್	2	0	2
27	ಟೂರಿಸಂ ಅಡ್ಮಿನಿಸ್ಟ್ರೇಷನ್	3	1	2
28	ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್	52	1	51

29	ಕಾನೂನು	36	31	5
30	ಸಂಗೀತ	5	1	4
31	ಭೌತಶಾಸ್ತ್ರ	356	313	43
32	ಎಲೆಕ್ಟ್ರಾನಿಕ್ಸ್	31	23	8
33	ರಸಾಯನಶಾಸ್ತ್ರ	155	161	4
34	ಕೈಗಾರಿಕ ರಸಾಯನಶಾಸ್ತ್ರ	6	3	3
35	ಬಯೊಕೆಮಿಸ್ಟ್ರಿ	24	17	7
36	ಗಣಿತಶಾಸ್ತ್ರ	303	276	27
37	ಗಣಕವಿಜ್ಞಾನ	248	138	110
38	ಸಂಖ್ಯಾಶಾಸ್ತ್ರ	13	9	4
39	ಸಸ್ಯಶಾಸ್ತ್ರ	93	69	24
40	ಅಪ್ಲೈಡ್ ಜಾಟನಿ	3	3	0
41	ಬಯೋಟೆಕ್ನಾಲಜಿ	17	17	0
42	ಮೈಕ್ರೋಬಯಾಲಜಿ	22	22	0
43	ಪ್ರಾಣಿಶಾಸ್ತ್ರ	88	73	15
44	ಫೋರನ್ಸಿಕ್ ಸೈನ್ಸ್	2	2	0
45	ಪರಿಸರ ವಿಜ್ಞಾನ	6	4	2
46	ರೇಷ್ಮೆಕೃಷಿ	7	5	2
47	ಭೂವಿಜ್ಞಾನ	6	6	0
48	ಪತ್ರಕೋದ್ಯಮ	9	7	2
49	ಗೃಹ ವಿಜ್ಞಾನ	49	42	7
	ಒಟ್ಟು	**5797**	**4950**	**847**
1	ಗ್ರಂಥಪಾಲಕರು	339	323	16
2	ದೈಹಿಕ ಶಿಕ್ಷಣ ಬೋಧಕರು	300	285	15

ಭೋದಕೇತರರ ಸಿಬ್ಬಂದಿಗಳ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ಖಾಲಿ ಹುದ್ದೆಗಳ ವಿವರ

ಕ್ರ ಸಂ.	ವೃಂದ	ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ	ಖಾಲಿ ಹುದೆ
1	ಮ್ಯಾನೇಜರ್	95	90	5
2	ಅಧೀಕ್ಷಕರು	350	257	93
3	ಪ್ರ.ದ.ಸ	462	262	200
4	ದ್ವಿ.ದ.ಸ	472	327	145
5	ಬೆರಳಚ್ಚುಗಾರರು	406	331	75
6	ಗ್ರಂಥಾಲಯ ಸಹಾಯಕರು	273	10	263
7	ಅಟೆಂಡರ್	1207	818	389
8	ಪರಿಚರಕರು	1381	219	1162
9	ಶೀಘ್ರಲಿಪಿಗಾರರು	13	10	3
10	ಡ್ರೈವರ್ಸ್	11	10	1

ಆರೋಗ್ಯ ಸುಧಾರಣೆ ಯೋಜನೆ

605 (638) ಶ್ರೀ ವಸಂತಬಂಗೇರ ಕೆ. (ಬೆಳ್ತಂಗಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ಕರ್ನಾಟಕ ಆರೋಗ್ಯ ಪದ್ಧತಿ ಸುಧಾರಣಾ ಯೋಜನೆಯಡಿ 2011–12 ಮತ್ತು 2012–13 ರ ಸಾಲಿನಲ್ಲಿ ಎಷ್ಟು ಆಸ್ಪತ್ರೆಗಳ ಕಟ್ಟಡಗಳಿಗೆ ಮಂಜೂರಾತಿ ನೀಡಲಾಗಿದೆ.

ಆ) ಈವರೆಗೆ ಎಷ್ಟು ಆಸ್ಪತ್ರೆಗಳ ಕಟ್ಟಡ ರಚನೆಯನ್ನು ಪೂರ್ತಿಗೊಳಿಸಲಾಗಿದೆ. ಕಟ್ಟಡಗಳ ರಚನೆಗೆ ಖರ್ಚಾದ ಮೊತ್ತ ಎಷ್ಟು (ಜಿಲ್ಲಾವಾರು ವಿವರ ನೀಡುವುದು)